REGISTERED KA/BGW-1788/2020-2022 RNI No.KARBIL/2016/69545 MAG(3)/NPP/391/2015-2016

# MYSORE BANK SHATHAYU

# ಮೈಸೂರ್ ಬ್ಯಾಂಕ್ ಶತಾಯು

VOLUME - V APRIL, MAY, JUNE - 2020 MONTHLY RS. 2/- ISSUE-04, 05, 06

**House Bulletin of State Bank of Mysore Pensioners' Commune (R) - For Internal Circulation**

## LOCK DOWN CONTINUES - STAY HOME, STAY SAFE

No one expected that healthy citizens are compelled to confine themselves to their homes for over three months. Corona Virus imported from China has changed the way people live. Life has changed and most of their plans have been altered forcibly. Office of our Commune was bubbling with activities till 20th March, 2020. Plans for celebrations of Silver Jubilee were afoot. Celebrations were slated to be held at Hubballi on 15.03.2020, at Shivamogga on 11.04.2020 and at Belagavi on 18.04.2020. Unfortunately, all these Celebrations have been postponed. Fortunately, Celebrations at Bengaluru on 29.10.2020 are quite far away. It is reasonably expected that situation would be brought under control, by then. Unfortunately, cases already filed are not being taken up by Hon'ble High Courts and Hon'ble Supreme Court now. In fact, Hon'ble Supreme Court has suspended limitation period till further orders, which means time available for various activities relating to legal proceedings has been extended. However, High Courts and Supreme Court have curtailed their holidays. Our Commune would initiate necessary measures for early hearing of cases, where cases have been filed/pending.

Cases regarding benefit of five years to those who retired under Exit policy of State Bank of Mysore and five years' benefit of those who retired under Voluntary Retirement Scheme - 2001 of other erstwhile Associate Banks have been filed and are pending before various Courts. Similarly, Regulation 37 benefit cases of 7th Bipartite and 8th Bipartite retirees' have also been filed and/or pending before various Courts, including Hon'ble Supreme Court. Contempt Petition relating to Dearness Relief in terms of Regulation 37, payment of commutation of differential Basic Pension and method of calculation of interest has since been filed by our Apex Organisation, All India Retired Bank Employees' Association is oldest among non-SBI Bank Retirees organizations in the country, having founded in the year 1991 and AIRBEA is also one of the Appellants before Hon'ble Supreme Court in G Palani's (1616-1684) case. Indian Banks' Association and all other Public Sector Banks, including erstwhile Associate Banks are Respondents in Civil Appeals filed by the Association. Consequently, the benefits which are denied to non-petitioners from State Bank of Mysore are also covered. All required measures have already been initiated. With this, members of our Commune are proud that their organization is taking lead in securing all these benefits.

### OPENING OF COMMUNE'S OFFICE

Government of India has extended Lock down 4.0 till 30.06.2020, with relaxations. However, those who are over 65 years, persons with comorbidities and those who are less than 10 years of age are not allowed to venture out. Large number of members of our Commune are also over 65 years of age. Most of the functionaries of our Commune are also over 65 years of age. Opening of Commune's office would facilitate a large number of such members and others with comorbidities to venture out of their safe homes. Commune acts with utmost responsibility. Therefore, it is incumbent upon our Commune to protect its members. Our Commune should not provide reasons for its members to venture out of their safe home. Therefore, Commune would open its office and function normally, only when it is safe for members to visit the office. However, functionaries are initiating all such actions which are required by working from their homes. Arrears Statements and debit authorisations, which have not yet been dispatched would be dispatched, within a couple of weeks. **Those who retired on or after 01.03.17 and those who retired during 7th Bipartite Settlement period would receive these statements and debit authorisations** as it is endeavour of the Commune to provide hard copies of these statements, to each of those who have honoured first part of their commitments. **However, the Commune has already initiated required legal process and filing of cases is not being delayed, even in respect of 9th and 10th Bipartite Settlement period retirees/ pensioners.** Even before this issue of Mysore Bank Shathayu reaches our Commune's members, petitions would be filed. Only those who have complied with the requirement of remitting of amounts communicated by the Commune and also return of Debit authorisations, duly filled in and signed, are assured of benefits

likely to be ordered by the Courts. Our Commune, though makes all efforts for extension of benefit to all, State Bank of India may still refuse payment to such people whose names are not supplied to the Courts/Bank. Once again members are requested to have patience and to wait. This mainly on account of unprecedented and unexpected situation caused by lock down, social distancing, containment, etc. on account of COVID – 19. Our Commune, through State Bank Retirees' Association, would not leave any stone unturned in securing the legitimate benefits to its members. Commune appeals and request everyone to participate in these legal struggles by fully complying with requirement. Members of the Commune are proud as everyone participates.

Everything, like obtaining Form 16, 26AS, filing of Income Tax returns, submission of 15G/H, filing of Court Cases, can wait. Last date for filing of Income Tax Returns has been extended to 30.11.2020. Therefore, ensure that everyone including members of their families are protected from this terrible disease, COVID – 19.

### DATA OF POST-MERGER RETIREES

Those who have retired on or after 01.03.2017 were requested to provide their pension data to the Commune, since the Commune is having complete data of those who retired on or before 01.03.2017 and partial data of some of those who retired later. Availability of complete data helps the Commune to take informed decisions and help its members. It also becomes useful for supplying Calculation Sheets to those who have contributed Rs. 5,000/-.

Upon request of the Commune, many of those who retired post-merger, provided their data. But, due to practical and technical reasons, it was difficult to make data entry. Therefore, those who have retired on or after 01.03.2017 and not yet provided data are requested to key in data using the link:

**https://docs.google.com/forms/d/e/1FAIpQLSetzzAaFHu4NOSI3-NuPJsnIdHFQfJ7cXV9Ko8UoXsJ6NoPmA/viewform?usp=sf_link**

Calculation Sheets of only those who have retired on or after 01.03.2017 and provided the data would be provided. Therefore, all those who have not yet provided data are requested to provide the same.

## PAYMENT OF COMMUTATION

Members of the Commune have created history. For the first time in the annals of Banking Industry, a portion of Commutation is paid after a period of time and reduction /recovery of commuted portion commencing from the month succeeding the month in which commutation is paid. There are various instances, where the Banks have paid pension arrears and commutation thereof retrospectively, but also recovered such portions of commutation from the date of retirement, instead of recovering subsequent to the date of payment of commutation. Our Commune was fighting for this benefit from the year 2012. The Commune also took up with our Bank Management for not recovering commutation amount from the arrears paid on account of 10th Bipartite Settlement/Joint Noted dated 25.05.2015. Since, there was no precedence and no Bank had adopted that method, we could not succeed. But, the matter was being pursued. Then the Judgment in 1616 – 1684 case was delivered. Bank paid arrears to all alongwith interest, but without payment of commutation. Corporate Centre advised Bengaluru LHO to keep in mind that 15 year period after retirement is over, with regard to payment of Commutation. When no Bank Retirees' Apex Organisation came forward to take up this issue with Indian Banks Association, our Commune had no option to fight it out in Hon'ble Supreme Court by filing Contempt Petition succeeded in convincing the Court. Hon'ble Supreme Court ordered payment of Commutation of differential basic pension without falling back on any provision of Regulation 41, but age at the time of retirement should be reckoned. 648 pensioners of State Bank of Mysore have received Commutation in terms of order dated 28.08.19 of Hon'ble Supreme Court, without effecting any reduction/recovery out of arrears. It is indeed creation of a History. All India Retired Bank Employees' Association, took up this issue with Indian Banks' Association. Now, leaders of all Apex Organisations have understood that claim of our commune is not only correct, but also legitimate. Now, every organization is taking up this issue with Indian Banks Association. Therefore, members of State Bank of Mysore Pensioners' Commune are proud that their organization is setting the agenda in the Industry. Our All India Retired Bank Employees' Association has filed Contempt petition, immediately after relaxation of curbs.

## SBI GROUP MEDICLAIM POLICY – INTRODUCTION OF E-PHARMACY SCHEME

Renewal of Medical Insurance Scheme with effect from 16th January, 2020 was advised by the Bank vide e-circular No. CDO/P&HRD-PPFG/65/2019-20 dated 27th December, 2019. Modifications in terms and conditions of the policy were also communicated through this Circular. It was advised in the said e-Circular that the Bank will make arrangement of allowing cashless domiciliary facility for members of Annual Payment Plan (APP) under "SBI Health Assist" through e- Pharmacy Tie-up. In terms of the scheme a member of the Annual Payment Plan is eligible for purchase of medicines through an App, 'UR World', by uploading a valid prescription issued by a Registered Medical Practitioner. Members would be eligible to indent medicines for spouses / disabled children (as per records in Annual Payment Plan) within the prescribed limits.

The Bank has made arrangements with Lifetime Wellness Rx International Limited popularly known as M/S Apollo Life for

providing pharmacy services to the members of APP through an App named "URWORLD". Indent for medicines by the members can be placed only through the App. No manual order for medicines would be allowed in the scheme. The App "URWORLD" can be downloaded from Google Play Store through Android Mobile Phones. It can also be downloaded by clicking the link https://play.google.com/store/apps/details?id=com.apollo.urworld.

Even though, original plan provided for coverage upto Rs.18,000/- with the first Rs.6,000/- to be contributed by the members, it has now been limited to Rs.12,000/-, out of which purchase/s to the extent of Rs.4,000/- should be made by the members first and remaining medicines to the extent of balance of Rs.8,000/- would be supplied without any payment from members of the APP. Reduction in the limit is on account of elapse of four months. A member of the Annual Payment Plan is eligible to purchase medicines through the App by uploading a valid prescription issued by a Registered Medical Practitioner. No reimbursement can be claimed from the Bank against such expenditure incurred by the retirees under any other scheme of the Bank.

The Medicines will be delivered by the Vendor Company strictly at the registered address of the members under APP. No request will be entertained by the Vendor Company for delivery of medicines at a place other than the address registered in Annual Payment Plan. However, any change in the registered address can be effected by Corporate Centre on acceptable grounds once communicated through the concerned Administrative Offices. However, on launch of the services, if incorrect address is appearing in the App, it can be modified by the member once through the App.

Logging into the "URWORLD" App will be based on Mobile Number of the member. Once, a member logs into the App, a One Time Password (OTP) will be generated and sent to the mobile number of the member registered under the Annual Payment Plan. There is no provision in the App to use one Mobile Number for more than one PF Index Number. Any cases of error in Mobile Number may be taken up through concerned Administrative Office with Corporate Centre for rectification. For allowing the facility to members, Enrolment Data of "Annual Payment Plan" has been used. It may be noted that any request for change / correction in Mobile Number / subsequent change in registered address will be entertained through Administrative Offices only. Total Domiciliary Limit to the members of Annual Payment Plan for the period from 1st June 2020 to 15th Jan 2021.

The arrangement provides for various payment options viz. Cash on Delivery (COD) and payment through swipe machines will be available for making payment by the members. However, in order to indent medicines, members shall have to upload a valid prescription as per the Drugs & Cosmetics Act and Pharmacy Practice Regulation, 2015 which should be clear and legible and must contain name of the "Retiree" and / or spouse / disabled children (if any) and their age. Vendor Company will provide discount in price on all medicines @ 18% to members. This discount will be applicable on MRP printed on the cover of the medicines. The said discount will be applicable to all the medicines delivered by the Company to the members. However, validity of a Doctor's prescription will be 180 days. Prescription older than 180 days will not be entertained and in such case, member will have to procure new prescription.

After receipt of requisition from the member, Vendor Company will arrange for a confirmation call in order to confirm the order and quantity of the medicines. Only after confirmation by the member, order shall be considered for further processing. Members will be allowed to purchase medicines even beyond the limit of Rs. 12,000/- (Rupees Twelve Thousand only) by making payment from their own sources and the vendor Company will allow eligible discounts on such purchases also. The deadline for delivery of medicines by the Vendor Company will be 12 to 36 hours in Metro / Urban / Semi Urban areas and 72 to 96 hours in rural areas. Members will have to mandatorily show original prescription and valid identification proof during the delivery of medicines. There shall be a provision for cancellation of order by the members. A member can cancel the order till the time status of the item purchased is not showing "Order dispatched" in the App. Cancellation after "Order dispatched" status will attract a penalty of Rs. 100/- (Rupees One Hundred only) which will be recovered from the member by the Company. No Service Charges, Fees or any additional expenses should be paid by the members in addition to the amount of the bill raised by the Vendor Company. Operating hours of the Vendor Company will be 9.00 am to 6.00 pm everyday including Sundays. A member will receive Prescription Validation Call to confirm the order within 4 hours of uploading the prescription on the App. If an order has been uploaded after the operating hours, member will receive Prescription Validation Call the next day.

In this e-Pharmacy Scheme, only allopathic medicines will be supplied to the members. Return of medicines will not be accepted after delivery. Minimum amount of order will be Rs. 250/-.

The Scheme has several infirmities. Medicines could be purchased only through Android Smart Phones. App does not support iOS (i.e in iphones). Therefore, those who do not have Smart phones are unable to purchase medicines. Limit is reduced by one third. Medicines are delivered only at registered address, but many of the members are staying at different address for various reasons, including COVID – 19. Still, there are some glitches in the software. Our State Bank Retirees' Association has taken up these issues with the Corporate Centre.

## SBI MEDICAL INSURANCE – ECARDS AND CONTACT DETAILS

Many of members of our Commune who have opted for Annual Payment Plan – SBI Medical Insurance have received eCards, by courier. Still many have not also received eCards, on account of lock down and restrictions in view of COVID-19. In case, any of them who have not received eCards, need these eCards, they

are requested to email their request to get eCard of Medibuddy, send an Email to sbi.support @mediassist.in, with PF number. MediBuddy will send the ecards. They may also use link https://www.medibuddy.in/ ecard. Then Select 'Employee ID' and enter HRMS Number against 'Employee ID', enter 'STATE BANK OF INDIA' against 'Company's name' and your name, against 'Your name'. Then enter OTP received. Now, eCards can be downloaded.

Further, contact details of Brokers and TPA is provided for the benefit of members of our members :

**SBI MEDICAL BENEFIT SCHEME-SBI HEALTH ASSIST (POLICY B)- TPAs : CONTACT DETAILS**

**1. TPA : FHPL, Hyderabad**

**CIRCLES:** Kolkata, Bhopal, Amaravati, Bhubaneshwar, Guwahati and Patna.

**CONTACT DETAILS:**

**Email:** info@fhpl.net, grievances@fhpl.net **For cashless:** intimation@fhpl.net **Customer Care:**1-1800-425-4033

**2. MEDIASSIST, BANGLORE**

**CIRCLES:**Banglore, Lucknow, Hyerabad, Mumbai & Maharashtra

**CONTACT DETAILS:**

**Email:** info@mediassist.in **Customer Care:** 080-2206-9449

**For Senior Citizens:** 1800-419-9493

**For Claims:** 1800-425-9449

**3. RAKSHA, FARIDABAD**

**CIRCLES :** Delhi, Jaipur, Chandigarh and Ahmedabad

**Contact Details: Email:** crcm@rakshatpa.com

**For cashless:** cashless@rakshatpa.com

**Customer Care: Faridabad:** 0129-4289999,1800-180-14444

**Mumbai:** 022-67876666, 1800-220-456

**Bangalore:** 080-42839999, 1800-425-8910

**4. VIDAL, CHENNAI**

**CIRCLES :** Chennai, Kerala

**Email:** help@vidalhealthtpa.com

**Customer Care:** 080-46267020, 1860-425-0253

**INSURANCE BROKER : ANAND RATHI INSURANCE BROKERS LTD., MUMBAI**

**CIRCLES:** For all the circles

**Email:** sbigmhelpdesk@rathi.com, insurance@rathi.com

**Toll free:** 1800-123-8733, 022-49093000

**SBI GENERAL INSURANCE**

**Website:** www.sbigeneral.in

**Toll Free:** 1800-22-1111, 1800-102-1111

**Email:** customer.care@sbigeneral.in

## PENSIONERS' IDENTITY CARDS

State Bank of India has issued instructions to all Local Head Offices for issue of Pensioners' Identity Cards vide Circular letter No.HR/PPG/CPM/2020-21/16 dated 29.05.2020. Instructions are for issue of Identity Cards with uniform design, throughout the Country, with a view to standardize the format. Cards have to be printed on 1.5 mm thick card paper with size of 5.4 X 8.5 Cms. These cards would be laminated. Once the facility of printing Cards is available in HRMS, Identity Cards issued earlier would be replaced. Instructions have been issued to Local Head Offices to contact pensioners to whom cards are already issued by SMS or Email. State Bank Retirees' Association has also requested for deletion of account details from the Card and also issue plastic cards, as being issued now. Therefore, members are requested to wait for information and they should not be in a hurry to apply.

## SILVER JUBILEE VIDEO

No story is complete without History. Our Commune is in its Silver Jubilee year. With a view to provide a Bird's eye view of our Commune's history, our Commune has brought out a 5.55 min Video. Members are requested to view Video and suggestions if any, may please be provided. The link is : https://drive.google.com/open? id = 1zUiMvXG86J_EjbOgC7xNkhKq4GZGLJOV

## FREEZING OF DA & SALARY REDUCTION

Central Government has frozen increase of Dearness Allowance/Relief to its employees and pensioners till June 2021. Several State Governments, including Telangana and Kerala have sought reduction/recovery of/from salary and pension to meet the liabilities arising out of pandemic. While Delhi High Court upheld the authority of Government of India to freeze Dearness Allowance/Relief, Kerala High Court and Telangana High Court have disallowed such reduction/recovery of/from salary and pension. Delhi High Court has observed that in terms of Central Civil Services (Pension) Rules, 1972, Dearness Allowance is payable at the rates specified by Government and therefore, Government of India is well within its right to freeze Dearness Allowance. The authority and validity of provisions of Pension Rules / Regulations have been upheld and payment of pension cannot be less than the rates prescribed in the Pension Rules/ Regulations. Therefore, this Judgment has validated claims of our Commune/SBRA regarding payment of pension in terms of existing Rules/Regulations.

High Court of Telangana has taken a stand that the Government do not have power to postpone, let alone reduce. Apparently, there appears to be contrary stands.

## ADDITIONAL INTEREST OF 1% TO RETIRED EMPLOYEES

It is pleasure in informing that Corporate Centre has agreed with our views regarding payment of additional interest of 1% to those who retired voluntarily and under Voluntary Retirement Scheme. **The Bank has since issued e-Circular No. CDO/P&HRD-IR/23/2020–21 dtd 16.06.2020.** Contents of the

Circular is heartening. It is on account of efforts of the State Bank Retirees' Association, the Bank has decided to extend the benefit of an additional rate of interest of 1% to erstwhile Associate Bank Retirees' who retired Voluntarily and also under Voluntary Retirement Scheme. **In terms of earlier Instructions vide Circular No. CDO/P&HRD-IR/17/2019 – 20 of the 22nd May 2019, those who retired voluntarily from erstwhile Associate Banks were not eligible for this benefit of additional 1% interest.** This benefit was restricted to those e-AB retirees who retired on Superannuation. This matter was taken up by Coordination of erstwhile Associate Bank Retirees' Organisations vide letter dated 25.5.2019. The Corporate Centre sought information with regard to provisions relating to this issue. Circulars from all erstwhile Associate Bank Retirees' Associations were forwarded to Corporate Centre. It was indeed followed up regularly. Our efforts have resulted in revised instructions. Everyone is requested to preserve the Copy of the Circular and in the event of any question, in future, Circular Instruction may be brought to the notice of the concerned.

## MODIFICATIONS IN SCHEME – LOAN FOR PENSIONERS

Bank has modified certain instructions with regard to loan for Pensioners. Earlier, guarantee of Surviving Spouse was necessary. Now, the requirement of third party guarantee has been waived for Regular Pensioners (including SBI Regular Pensioners). EMIs have to be paid from the Pension Account after one month of disbursement of loan. Repayment period in respect of loan for pensioners and family pensioners is for a period of 78 months, subject to full repayment of loan by 78 years of age. Loan can be availed in any of the Branches (earlier it was allowed only at Pension paying branch). These changes are effected vide Sl. No.: 1682/2019-20 Circular No.: NBG/PBU/PL-PENSION/79/ 2019-20 Date: Wed 4 Mar, 2020. Service Charges are waived for Staff Pensioners vide (Sl.No.: 1413/2019 - 20 Circular No.: NBG/PBU/ PLPENSION/64/2019 - 20 Date: Thu 2 Jan 2020. Members who need financial assistance, may avail facilities, offered.

## LOCAL PURCHASE OF MEDICINES – TILL 30.06.2020

Due to COVID – 19, Government of India has placed restriction on movement of Senior Citizens, treating them as those belonging to vulnerable section. Consequently, they are unable to visit the dispensaries maintained by the Bank, which are dispensing medicines. Earlier, in some Circles purchases from local medical shops/online drug sellers were allowed, to avoid transmission of infection of COVD – 19. Now, Corporate Centre has advised all Local Head Offices to all pensioners to purchase medicines from Pharmacies or purchase through online, vide Circular letter No.HR/IR/SKJ/136 dated 21/05/2020. Cost of Drugs purchased between 15.03.2020 to 30.06.2020 from local medical shops/online drug sellers is reimbursed. Cash Memo/Bill should be presented to dispensaries from which members are obtaining medicines for reimbursement. Quantity of medicines should not exceed requirement for three months. However, only cost of such medicines which are being dispensed by the Bank's clinics are reimbursed.

**COVID - 19 is also covered in IBA Medical Insurance & SBI Medical Insurance - APP**

**List of Donations will be published in next edition**

## FORM - IV

**Statement about ownership and other particulars about newspaper, Mysore Bank Shathayu**

| | | |
|---|---|---|
| 1. | Place of Publication | 644/645, 1st Floor, State Bank of Mysore, Bangalore Branch Premises, Avenue Road, Bangalore - 560009 |
| 2. | Periodicity of its publication | Monthly |
| 3. | Printer's Name | Prasad C N |
| 4. | Nationality | Indian |
| 5. | Address | 644/645, 1st Floor, State Bank of Mysore, Bangalore Branch Premises, Avenue Road, Bangalore - 560009 |
| 6. | Publisher's Name | Prasad C N |
| 7. | Nationality | Indian |
| 8. | Address | 644/645, 1st Floor, State Bank of Mysore, Bangalore Branch Premises, Avenue Road, Bangalore - 560009 |
| 9. | Editor's Name | V. Dattathri |
| 10. | Nationality | Indian |
| 11. | Address | 644/645, 1st Floor, State Bank of Mysore, Bangalore Branch Premises, Avenue Road, Bangalore - 560009 |
| 12. | Names and addresses of individuals who own the newspaper and partners or shareholders holding more than one per cent of the total capital | State Bank of Mysore Pensioners' Commune (R) |

I, Prasad C N, hereby declare that the particulars given above are true to the best of my knowledge and belief

Sd/-

Date : 15.03.2020

Signature of Publisher

## ಲಾಕ್‌ಡೌನ್ ಇನ್ನೂ ಇದೆ......
## ಮನೆಯಲ್ಲಿಯೇ ಇರಿ, ಸುರಕ್ಷಿತವಾಗಿರಿ

ಇದನ್ನು ಯಾರೂ ನಿರೀಕ್ಷಿಸಿರಲಿಲ್ಲ, ಸಂಪೂರ್ಣ ಆರೋಗ್ಯವಂತರು ಸಹಾ ಮೂರು ತಿಂಗಳುಗಳಿಗೂ ಹೆಚ್ಚು ಕಾಲ ತಂತಮ್ಮ ಮನೆಯಲ್ಲಿಯೇ ಬಂಧಿಯಾಗಿರಬೇಕಾಗತ್ತದೆ ಎಂಬುದನ್ನು. ಚೀನಾದಿಂದ ಆಮದಾಗಿದೆ ಎನ್ನಲಾದ ಕೊರೋನಾ ಎಂಬ ವೈರಾಣು ಜನರ ಜೀವನ ಗತಿಯನ್ನೇ ಬದಲಿಸಿದೆ. ಎಲ್ಲರ ಲೆಕ್ಕಾಚಾರಗಳೂ ತಲೆಕೆಳಗಾಗಿವೆ. ಸದಾ ಚಟುವಟಿಕೆ ಯಿಂದ ತುಂಬಿರುತ್ತಿದ್ದ ನಮ್ಮ ಕಮ್ಯೂನಿನ ಕಛೇರಿಯ ಬಾಗಿಲು 20ನೇ ಮಾರ್ಚ್ 2020 ರಿಂದ ಈವರೆಗೂ ತೆರೆದಿಲ್ಲ. ಈ ವರ್ಷ ಕಮ್ಯೂನಿನ ರಜತ ಮಹೋತ್ಸವ ವರ್ಷ. ಹುಬ್ಬಳ್ಳಿ, ಶಿವಮೊಗ್ಗ ಮತ್ತು ಬೆಳಗಾವಿಯಲ್ಲಿ ಅದ್ದೂರಿಯಾಗಿ ನಡೆಸಲು ಯೋಜಿಸಿದ್ದ ರಜತ ಮಹೋತ್ಸವ ಸಮಾರಂಭ ಗಳೆಲ್ಲವೂ ಮುಂದೂಡಲ್ಪಟ್ಟಿವೆ. ಬೆಂಗಳೂರಿನಲ್ಲಿ ನಡೆಸಬೇಕೆಂದು ನಿಶ್ಚಯಿಸಿರುವ ರಜತ ಮಹೋತ್ಸವ ಕಾರ್ಯಕ್ರಮದ ದಿನಾಂಕ 29ನೇ ಅಕ್ಟೋಬರ್ 2020 ಇನ್ನೂ ಬಹಳ ದೂರದಲ್ಲಿದೆ. ಆ ವೇಳೆಗೆ ಪರಿಸ್ಥಿತಿ ಸಂಪೂರ್ಣ ನಿಯಂತ್ರಣಕ್ಕೆ ಬರಬಹುದು ಎಂಬುದೇ ನಮ್ಮೆಲ್ಲರ ನಿರೀಕ್ಷೆ.

## ನ್ಯಾಯಾಲಯದಲ್ಲಿ ಬಾಕಿ ಇರುವ ಮೊಕದ್ದಮೆಗಳು

ಕೊರೋನಾ ವಿಧಿಸಿದ ನಿರ್ಬಂಧಗಳು ಭಾರತದ ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯದ ಉಚ್ಚ ನ್ಯಾಯಾಲಯಗಳಲ್ಲಿ ನಾವು ಹೂಡಿರುವ ದಾವೆಗಳ ಮೇಲೂ ಪರಿಣಾಮ ಬೀರಿವೆ. ಈಗ ಎರಡು ನ್ಯಾಯಾಲಯಗಳೂ ತಮ್ಮ ರಜಾದಿನಗಳನ್ನು ಮೊಟಕುಗೊಳಿಸಿದ್ದು, ನಮ್ಮ ಮೊಕದ್ದಮೆಗಳ ವಿಚಾರಣೆ ಗಳನ್ನು ಆದಷ್ಟು ತ್ವರಿತವಾಗಿ ಮುನ್ನಡೆಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಸಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ನೌಕರರ ನಿರ್ಗಮನ ನೀತಿಯನ್ವಯ ನಿವೃತ್ತರಾದವರಿಗೆ ಮತ್ತು 2001ರ ಸ್ವಯಂ ನಿವೃತ್ತಿ ಯೋಜನೆಯನ್ವಯ ನಿವೃತ್ತಿ ಪಡೆದ ಇತರ ಸಹವರ್ತಿ ಬ್ಯಾಂಕುಗಳ ನಿವೃತ್ತರಿಗೆ ಐದು ವರ್ಷಗಳ ಸೇವಾವಧಿ ಲಾಭವನ್ನು ವಿಸ್ತರಿಸುವುದಕ್ಕೆ ಸಂಬಂಧಿಸಿದಂತೆ ಹಾಗೂ 7ನೇ ಮತ್ತು 8ನೇ ದ್ವಿಪಕ್ಷೀಯ ಒಪ್ಪಂದದ ಅವಧಿಯಲ್ಲಿ ನಿವೃತ್ತರಾದವರಿಗೆ ನಿಬಂಧನೆ 37ರ ಪ್ರಕಾರ ಬರಬೇಕಾಗಿರುವ ಸೌಲಭ್ಯಗಳನ್ನು ಕೋರಿ ಮಾನ್ಯ ಸುಪ್ರೀಂ ಕೋರ್ಟು ಸೇರಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಹೂಡಿದ ಮೊಕದ್ದಮೆಗಳು ವಿವಿಧ ಹಂತಗಳಲ್ಲಿವೆ. ನಮ್ಮ ಶೃಂಗ ಸಂಸ್ಥೆಯಾದ ಅಖಿಲ ಭಾರತ ನಿವೃತ್ತ ಬ್ಯಾಂಕ್ ನೌಕರರ ಸಂಘವು (ಎಐಆರ್‌ಬಿಇಎ) ನಿಬಂಧನೆ 37ರನ್ವಯ ಬರಬೇಕಾದ ತುಟ್ಟಿಭತ್ಯೆ ಪರಿಹಾರ, ಹೆಚ್ಚಳವಾದ ಮೂಲ ಪಿಂಚಣಿ ಮೇಲಿನ ಕಮ್ಯುಟೇಷನ್ ಮೊಬಲಗಿನ ವ್ಯತ್ಯಾಸ ಮತ್ತು ಬಡ್ಡಿ ಲೆಕ್ಕಮಾಡುವ ವಿಧಾನಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯ ನಿಂದನೆ ಮೊಕದ್ದಮೆಯನ್ನು ಹೂಡುವ ಸಿದ್ಧತೆಯಲ್ಲಿದೆ. 1991ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ನಿವೃತ್ತ ಬ್ಯಾಂಕ್ ನೌಕರರ ಸಂಘವು ದೇಶದ ಅತ್ಯಂತ ಹಳೆಯ ಭಾರತೀಯ ಸ್ಟೇಟ್ ಬ್ಯಾಂಕೇತರ ನಿವೃತ್ತರ ಸಂಘಟನೆಯಾಗಿದ್ದು, ಜಿ. ಪಳನಿಯವರ (1616–1684) ರ ಪ್ರಕರಣದ ಅಪೀಲುದಾರರ ಪೈಕಿ ಈ ಸಂಘಟನೆಯೂ ಒಂದು. ಸಂಘವು ಹೂಡಿರುವ ಸಿವಿಲ್ ಅಪೀಲಿನಲ್ಲಿ ಭಾರತೀಯ ಬ್ಯಾಂಕರುಗಳ ಸಂಘ ಮತ್ತು ಈ ಹಿಂದಿನ ಸಹವರ್ತಿ ಬ್ಯಾಂಕುಗಳೂ ಸೇರಿದಂತೆ ಸಾರ್ವಜನಿಕ ಕ್ಷೇತ್ರದ ಎಲ್ಲಾ ಬ್ಯಾಂಕುಗಳು ಪ್ರತಿವಾದಿಗಳಾಗಿವೆ. ಇದರ ಪರಿಣಾಮವಾಗಿ, ಮೊಕದ್ದಮೆಯಲ್ಲಿ ಭಾಗಿಯಾಗಿಲ್ಲವೆಂಬ ಕಾರಣ ನೀಡಿ ನ್ಯಾಯಾಲಯದ ತೀರ್ಪಿನನ್ವಯ ಬರಬೇಕಾದ ಲಾಭಗಳಿಂದ ವಂಚಿತರಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ನಿವೃತ್ತರನ್ನೂ ಈ ಪ್ರಕರಣದಲ್ಲಿ ಒಳಪಡಿಸಿದಂತಾಗಿದೆ.

## ಕಮ್ಯೂನು ಕಛೇರಿಯ ಕಾರ್ಯಾರಂಭ

ಕೊರೋನಾ ಹಾವಳಿಯನ್ನು ತಡೆಗಟ್ಟಲು ಸರ್ಕಾರವು ವಿಧಿಸಿದ ನಿರ್ಬಂಧಗಳನ್ನು 30ನೇ ಜೂನ್ 2020ರವರೆಗೂ ಸಡಿಲಿಸಲಾಗಿದೆ. ನಮ್ಮ ಸದಸ್ಯರು ಕಮ್ಯೂನಿಗೆ ನಿರಂತರ ಭೇಟಿಕೊಡುತ್ತಿರಬೇಕೆಂಬುದೇ ನಮ್ಮ ಆಶಯ. ಆದರೆ 65 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯರು ಮತ್ತು 10 ವರ್ಷಗಳೊಳಗಿನ ಮಕ್ಕಳಿಗೆ ಕೊರೋನಾ ಅತಿ ಶೀಘ್ರವಾಗಿ ಹರಡುವ ಸಾಧ್ಯತೆಗಳಿರುವುದರಿಂದ ಈ ವಯೋಮಾನದವರು ಮನೆಯಿಂದ ಹೊರಗೆ ಓಡಾಡುವಂತಿಲ್ಲ. ನಮ್ಮ ಕಮ್ಯೂನಿನ ಬಹುತೇಕ ಸದಸ್ಯರು, ಪದಾಧಿಕಾರಿಗಳು ಮತ್ತು ಕಾರ್ಯಕರ್ತರು 65 ವರ್ಷ ಮೇಲ್ಪಟ್ಟವರಾಗಿದ್ದು, ಪ್ರತಿಯೊಬ್ಬ ಸದಸ್ಯನ ಆರೋಗ್ಯ ರಕ್ಷಣೆ ನಮ್ಮ ಮೂಲ ಕರ್ತವ್ಯ ಹಾಗೂ ಜವಾಬ್ದಾರಿ. ಕಮ್ಯೂನಿನ ಕಛೇರಿ ತೆರೆದಲ್ಲಿ ಹಿರಿಯ ನಾಗರಿಕರಾದ ನಮ್ಮ ಸದಸ್ಯರು ಕೊರೋನಾ ಸೋಂಕಿಗೆ ಒಳಗಾಗುವ ಸಾಧ್ಯತೆಯನ್ನು ತಳ್ಳಿಹಾಕವಂತಿಲ್ಲ. ಈ ಹಿನ್ನೆಲೆಯಲ್ಲಿ ಕೊರೋನಾಮುಕ್ತ ಸುರಕ್ಷಿತ ದಿನಗಳು ಬರುವವರೆಗೂ ಕಮ್ಯೂನಿನ ಕಛೇರಿಯನ್ನು ತೆರೆಯುವುದು ಅಸಾಧ್ಯ. ಆದರೆ ಕಮ್ಯೂನಿನ ಅಗತ್ಯ ಚಟುವಟಿಕೆಗಳು ಸ್ಥಗಿತಗೊಳ್ಳಬಾರದಲ್ಲ. ಆದಕ್ಕಾಗಿ ನಮ್ಮ ಕಾರ್ಯಕರ್ತರು ತಂತಮ್ಮ ಮನೆಗಳಿಂದಲೇ ಕಮ್ಯೂನಿನ ದೈನಂದಿನ ಕಾರ್ಯಕಲಾಪಗಳನ್ನು ನಿಭಾಯಿಸುತ್ತಿದ್ದಾರೆ. ಎಲ್ಲೆಡೆ ಕೊರೋನಾ ವೈರಾಣುವಿನ ಅಪಾಯದ ಕುರಿತಂತೆ ಸಾಕಷ್ಟು ಜಾಗೃತಿ ಮೂಡಿರುವುದರಿಂದ ನಮ್ಮ ಸದಸ್ಯರಿಗೆ ಈ ಬಗ್ಗೆ ಹೆಚ್ಚಿನ ವಿವರಣೆ ಅನಗತ್ಯವೆಂದು ನಮ್ಮ ಭಾವನೆ.

ಲಾಕ್‌ಡೌನ್ ಅವಧಿಯಲ್ಲಿ ಅಂಚೆ ಹಾಗೂ ಕೊರಿಯರ್ ಸೇವೆಗಳಲ್ಲಿ ವ್ಯತ್ಯಯವಾಗಿರುವುದು ನಮ್ಮ ಕಾರ್ಯಕ್ಷಮತೆಗೆ ದೊಡ್ಡ ಸವಾಲಾಗಿದೆ. ಆದುದರಿಂದ 01.03.2017ರ ನಂತರ ನಿವೃತ್ತರಾದವರು ಹಾಗೂ 7ನೇ ದ್ವಿಪಕ್ಷೀಯ ಒಪ್ಪಂದದ ಅವಧಿಯಲ್ಲಿ ನಿವೃತ್ತರಾದವರಿಗೆ ಅಂದಾಜು ತುಟ್ಟಿಭತ್ಯೆ ಬಾಕಿ ತಃಖ್ತೆಗಳು ಮತ್ತು ಋಣಿಕೆ ಅಧಿಕಾರ ಪತ್ರಗಳನ್ನು ಪರಿಸ್ಥಿತಿ ಮಾಮೂಲಿಗೆ ಬಂದ ನಂತರ ಕಳುಹಿಸಲಾಗುವುದು. 9 ಮತ್ತು 10ನೇ ದ್ವಿಪಕ್ಷೀಯ ಒಪ್ಪಂದದಲ್ಲಿ ನಿವೃತ್ತರಾದ ಪಿಂಚಣಿದಾರರಿಗೆ ಸಂಬಂಧಿಸಿದ ಮೊಕದ್ದಮೆ ಗಳನ್ನು ಹೂಡುವ ಪ್ರಕ್ರಿಯೆ ನಡೆಯುತ್ತಿದೆ. ಕಮ್ಯೂನಿನ ಕೋರಿಕೆಯಂತೆ ಮೊಬಲಗನ್ನು ಜಮಾ ಮಾಡಿ ಋಣಿಕೆ ಅಧಿಕಾರ ಪತ್ರವನ್ನು ಪೂರ್ಣವಾಗಿ ಭರ್ತಿಮಾಡಿ ಸಹಿ ಹಾಕಿ ಸಲ್ಲಿಸಿದವರಿಗೆ ನ್ಯಾಯಾಲಯದ ಆದೇಶದನ್ವಯ ಪರಿಹಾರಗಳು ದೊರೆಯುವುದು ನಿಸ್ಸಂಶಯ. ನ್ಯಾಯಾಲಯ ಆದೇಶಿಸುವ ಪರಿಹಾರಗಳನ್ನು ಸ್ಟೇಟ್ ಬ್ಯಾಂಕ್ ನಿವೃತ್ತರ ಸಂಘದ ಸಹಕಾರದೊಂದಿಗೆ ಎಲ್ಲ ಅರ್ಹ ಸದಸ್ಯರಿಗೂ ದೊರಕಿಸಿಕೊಡುವ ನಿಟ್ಟಿನಲ್ಲಿ ನಮ್ಮ ಪ್ರಯತ್ನವಿದ್ದೇ ಇರುತ್ತದೆ. ಆದರೆ ಭಾರತೀಯ ಸ್ಟೇಟ್ ಬ್ಯಾಂಕ್ ಎಂದಿನಂತೆ ಕಕ್ಷಿದಾರರಲ್ಲ ದವರಿಗೆ ನ್ಯಾಯಾಲಯದ ಆದೇಶ ಅನ್ವಯವಾಗುವುದಿಲ್ಲವೆಂಬ ನಿಲುವು ತಳೆಯುವ ಸಾಧ್ಯತೆಯನ್ನು ಉಪೇಕ್ಷಿಸುವಂತಿಲ್ಲ. ಆದುದರಿಂದ ಪ್ರತಿಯೊಬ್ಬರೂ ನಮ್ಮ ಮನವಿಗಳಿಗೆ ಸೂಕ್ತವಗಿ ಸ್ಪಂದಿಸುವುದರ ಮೂಲಕ ನಮ್ಮ ನ್ಯಾಯಯುತ ಹೋರಾಟದಲ್ಲಿ ಭಾಗಿಯಾಗಬೇಕೆಂದು ಕೋರುತ್ತೇವೆ.

ಕೊರೋನಾ ಸೃಷ್ಟಿಸಿದ ಭೀಕರತೆಯಿಂದಾಗಿ ಪ್ರತಿ ವರ್ಷವೂ ನಿಗದಿತ ಅವಧಿಯೊಳಗೇ ಪೂರೈಸಬೇಕಿದ್ದ ಹಲವು ಕಾರ್ಯಗಳನ್ನು ಈ ಬಾರಿ ಸರ್ಕಾರದ ಆದೇಶದಂತೆ ಮುಂದೂಡಲಾಗಿದೆ. ನಮೂನೆ 16 ಮತ್ತು 26

ಎಎಸ್‌ಗಳನ್ನು ಪಡೆಯಲು ಹಾಗೂ ಆದಾಯ ತೆರಿಗೆ ರಿಟರ್ನ್ ಮತ್ತು ನಮೂನೆ 15ಜಿ/ಹೆಚ್ ಸಲ್ಲಿಸುವುದಕ್ಕೆ ಇನ್ನೂ ಕಾಲಾವಕಾಶವಿದೆ. ಆದಾಯ ತೆರಿಗೆ ರಿಟರ್ನ್ ಸಲ್ಲಿಸುವ ಅಂತಿಮ ದಿನಾಂಕವನ್ನು 30ನೇ ನವೆಂಬರ್ 2020ರವರೆಗೆ ವಿಸ್ತರಿಸಲಾಗಿದೆ. ಆದುದರಿಂದ ದಯವಿಟ್ಟು ಮನೆಯಲ್ಲಿಯೇ ಇರಿ, ಸುರಕ್ಷಿತವಾಗಿರಿ. ಜಗತ್ತಿನಾದ್ಯಂತ ಕೊರೋನಾಗೆ ಬಲಿಯಾದವರಲ್ಲಿ 65 ವರ್ಷ ಮೀರಿದ ಹಿರಿಯ ನಾಗರಿಕರ ಸಂಖ್ಯೆಯೇ ಹೆಚ್ಚು ಎಂಬುದು ನೆನಪಿರಲಿ.

## ವಿಲೀನಾನಂತರ ನಿವೃತ್ತರಾದವರ ಮಾಹಿತಿಗಳು

01.03.2017ಕ್ಕೂ ಮೊದಲು ನಿವೃತ್ತರಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಉದ್ಯೋಗಿಗಳಿಗೆ ಸಂಬಂಧಿಸಿದ ಅಗತ್ಯ ಮಾಹಿತಿಗಳು ಕಮ್ಯೂನಿನಲ್ಲಿ ಲಭ್ಯವಿದೆ. 01.03.2017ರ ನಂತರ ನಿವೃತ್ತರಾಗಿ ತಮ್ಮ ಮೊದಲ ಪಿಂಚಣಿಯನ್ನು ಭಾರತೀಯ ಸ್ಟೇಟ್ ಬ್ಯಾಂಕಿನಿಂದ ಪಡೆದ ಮೈಸೂರು ಬ್ಯಾಂಕಿನ ಉದ್ಯೋಗಿಗಳು ತಮಗೆ ಸಂಬಂಧಿಸಿದ ಕೆಲವು ಮಾಹಿತಿಗಳನ್ನು ಒದಗಿಸಿದ್ದರೆ, ಇನ್ನೂ ಕೆಲವರಿಂದ ಮಾಹಿತಿಯನ್ನು ನಿರೀಕ್ಷಿಸುತ್ತಿದ್ದೇವೆ. ಎಲ್ಲ ಸದಸ್ಯರ ದತ್ತಾಂಶಗಳೂ ನಮ್ಮಲ್ಲಿ ಲಭ್ಯವಿದ್ದರೆ, ಕಾಲಕಾಲಕ್ಕೆ ಅಗತ್ಯವಾದ ತುರ್ತು ನಿರ್ಧಾರಗಳನ್ನು ತೆಗೆದುಕೊಳ್ಳಲು ನಮಗೆ ಅನುಕೂಲವಾಗುತ್ತದೆ. ಈ ಮಧ್ಯೆ ಕೊರೋನಾ ನಿರ್ಬಂಧಗಳಿಂದಾಗಿ, ಸದಸ್ಯರ ಮಾಹಿತಿಗಳನ್ನು ಕಮ್ಯೂನಿನ ಕಂಪ್ಯೂಟರಿನಲ್ಲಿ ಅಳವಡಿಸುವುದು ವಿಳಂಬವಾಗುತ್ತಿದೆ. ಆದುದರಿಂದ 01.03.2017ರ ನಂತರ ನಿವೃತ್ತಿಯಾಗಿದ್ದು, ಈವರೆಗೂ ತಮ್ಮ ಮಾಹಿತಿಗಳನ್ನು ನೀಡದೇ ಇರುವ ಸದಸ್ಯರು ದಯವಿಟ್ಟು ಈ ಕೂಡಲೇ ಇಲ್ಲಿ ನೀಡಿರುವ ಲಿಂಕ್ ಮೂಲಕ ವಿವರಗಳನ್ನು ಭರ್ತಿಮಾಡಿ, ಕಾನೂನಾತ್ಮಕ ಖರ್ಚುಗಳಿಗಾಗಿ ತಮ್ಮ ಕೊಡುಗೆಯಾದ ರೂ. 5,000 ಮೊಬಲಗನ್ನು ಕಮ್ಯೂನಿಗೆ ಸಲ್ಲಿಸಬೇಕೆಂದು ಕೋರುತ್ತೇವೆ. ಇದರಿಂದ ಆಯಾ ಸದಸ್ಯರಿಗೆ ಅಂದಾಜು ತುಟ್ಟಿಭತ್ಯೆ ಬಾಕಿಯ ವಿವರಗಳನ್ನು ನೀಡುವ ಕಾರ್ಯವನ್ನೂ ಆದಷ್ಟು ಬೇಗ ನಾವು ಪೂರ್ತಿ ಗೊಳಿಸಬಹುದು.

**https://docs.google.com/forms/d/e/1FAIpQLSetzzAaFHu4NOSl3-NuPJsnldHFQfj7cXV9Ko8UoXsJ6NoPmA/viewform?usp=sf_link**

## ಕಮ್ಯುಟೇಷನ್ ಪಾವತಿ – ಸರ್ವೋಚ್ಚ ನ್ಯಾಯಾಲಯದ ಆದೇಶ

ನಮ್ಮ ಕಮ್ಯೂನಿನ ಸದಸ್ಯರು ಚರಿತ್ರೆಯನ್ನೇ ಸೃಷ್ಟಿಸಿದ್ದಾರೆ. ಸಾಮಾನ್ಯವಾಗಿ ದ್ವಿಪಕ್ಷೀಯ ಒಪ್ಪಂದವು ಇತ್ಯರ್ಥವಾಗುವ ಮೊದಲೇ ನಿವೃತ್ತರಾದದವರಿಗೆ, ಇತ್ಯರ್ಥದ ನಂತರ ಹೊಸ ಒಪ್ಪಂದದ ಪ್ರಕಾರ ಮೂಲ ಪಿಂಚಣಿಯನ್ನು ಪರಿಷ್ಕೃತಗೊಳಿಸಿ ಪಿಂಚಣಿ ಹಣ, ಗ್ರಾಚ್ಯುಯಿಟಿ, ಕಮ್ಯುಟೇಷನ್ ಮುಂತಾದುವುಗಳ ಬಾಕಿ ಹಣವನ್ನು ಪಾವತಿಸಲಾಗುತ್ತದೆ. ಆಗ ಕಮ್ಯುಟೇಷನ್ ವಸೂಲಿಯ ಮಾಸಿಕ ಕಂತಿನ ಮೊತ್ತ ಸಹಾ ಹೆಚ್ಚಳವಾಗುವುದರಿಂದ ಬಾಕಿ ಹಣದಲ್ಲಿ ಆವರೆಗಿನ ಮಾಸಿಕ ಕಂತಿನ ಹೆಚ್ಚಳವನ್ನು ಕಳೆದು ಉಳಿದ ಮೊತ್ತವನ್ನು ಪಿಂಚಣಿದಾರರಿಗೆ ಜಮಾ ಮಾಡಲಾಗುತ್ತದೆ. ಈ ಪದ್ಧತಿ ಸರಿಯಲ್ಲ. ಕಮ್ಯುಟೇಷನ್ ಬಾಕಿ ಹಣವನ್ನು ಎರಡನೇ ಕಮ್ಯುಟೇಷನ್ ಎಂದು ಪರಿಗಣಿಸಿ, ಅದಕ್ಕೆ ಸಂಬಂಧಿಸಿದ ಮಾಸಿಕ ಕಂತುಗಳನ್ನು 180 ತಿಂಗಳಿಗೆ ಪ್ರತ್ಯೇಕವಾಗಿ ಲೆಕ್ಕಹಾಕಿ, ಎರಡನೇ ಕಮ್ಯುಟೇಷನ್ ಬಾಕಿ ಪಾವತಿಯಾದ ಮುಂದಿನ ತಿಂಗಳಿನಿಂದ 180 ತಿಂಗಳ ಕಾಲ ವಸೂಲಿ ಮಾಡಬೇಕೇ ಹೊರತು, ಅದನ್ನು ನಿವೃತ್ತಿಯ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೊಳಿಸಿ ಬಾಕಿ ಹಣದಲ್ಲಿ ಮುರಿದುಕೊಳ್ಳುವುದು ತಪ್ಪು. ಉದಾಹರಣೆಗೆ 01.11.2012ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದ 10ನೇ ದ್ವಿಪಕ್ಷೀಯ ಒಪ್ಪಂದವು 2015ರ ಮೇ 25ರಂದು ಇತ್ಯರ್ಥವಾಯಿತು. 01.11.2012ರಿಂದ ಮೇ 2015ರ ನಡುವೆ ನಿವೃತ್ತರಾದ ಉದ್ಯೋಗಿಳಿಗೆ ದ್ವಿಪಕ್ಷೀಯ ಒಪ್ಪಂದದನ್ವಯ ಮೂಲ ಪಿಂಚಣಿ, ಗ್ರಾಚ್ಯುಯಿಟಿ, ಕಮ್ಯುಟೇಷನ್ ಮತ್ತು ರಜಾ ನಗದೀಕರಣವನ್ನು ಪರಿಷ್ಕೃತಗೊಳಿಸಿ ಬಾಕಿ ಹಣವನ್ನು ಜುಲೈ–ಆಗಸ್ಟ್ ತಿಂಗಳಿನಲ್ಲಿ ಪಾವತಿಸುವಾಗ ಕಮ್ಯುಟೇಷನ್ ಪಾವತಿಯನ್ನು ಸಹಾ ನಿವೃತ್ತಿ ದಿನಾಂಕದಿಂದಲೇ ಜಾರಿಗೊಳಿಸಿ ಅಲ್ಲಿಯವರೆಗಿನ ಮಾಸಿಕ ಕಂತುಗಳನ್ನು ಬಾಕಿ ಪಾವತಿಯಲ್ಲಿ ಮುರಿದುಕೊಳ್ಳಲಾಯಿತು. ವಾಸ್ತವವಾಗಿ ಬಾಕಿ ಕಮ್ಯುಟೇಷನ್ ಮೊತ್ತಕ್ಕೇ 15 ವರ್ಷಗಳ ಅವಧಿಗೆ 180 ಪ್ರತ್ಯೇಕ ಮಾಸಿಕ ಕಂತುಗಳನ್ನು ನಿಗದಿಪಡಿಸಿ ಅದನ್ನು ಬಾಕಿ ಹಣ ನೀಡಿದ ದಿನಾಂಕದ ಮುಂದಿನ ತಿಂಗಳಿನಿಂದ ಅಂದರೆ ಆಗಸ್ಟ್–ಸೆಪ್ಟೆಂಬರ್ 2015ರಿಂದ ಮಾಸಿಕ ಪಿಂಚಣಿಯಲ್ಲಿ ವಸೂಲು ಮಾಡಬೇಕಿತ್ತು. ಅಂತಹ ಪಿಂಚಣಿದಾರರಿಗೆ ಕಮ್ಯುಟೇಷನ್ ವಸೂಲಿಯ ಎರಡು ಮಾಸಿಕ ಕಂತುಗಳಿರುತ್ತವೆ. ಇತರ ಹಲವು ಬ್ಯಾಂಕುಗಳು ಸಹಾ ಕಮ್ಯುಟೇಷನ್ ಬಾಕಿಗೆ ಸಂಬಂಧಿಸಿದಂತೆ ತಪ್ಪು ಪದ್ಧತಿಯನ್ನೇ ಅನುಸರಿಸುತ್ತಿವೆ.

ಈ ತಪ್ಪನ್ನು ಸರಿಪಡಿಸುವಂತೆ ಕೋರಿದ ನಮ್ಮ ಮನವಿಯನ್ನು ಬ್ಯಾಂಕಿನ ಆಡಳಿತ ವರ್ಗವು, ಈ ಬಗೆಯ ಯಾವುದೇ ಪೂರ್ವ ನಿದರ್ಶನಗಳಿಲ್ಲ ಎಂಬ ನೆಪವೊಡ್ಡಿ ತಳ್ಳಿ ಹಾಕಿತು. ನಂತರ 1616–1684ರ ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪಿಗನುಗುಣವಾಗಿ ಪರಿಷ್ಕೃತ ಮೂಲ ಪಿಂಚಣಿ, ಕಮ್ಯುಟೇಷನ್ ಮುಂತಾದುವುಗಳ ಬಾಕಿಯನ್ನು ಬಡ್ಡಿ ಸಮೇತ ಪಾವತಿಸಬೇಕಾಗಿ ಬಂದಾಗ, ಭಾರತೀಯ ಸ್ಟೇಟ್ ಬ್ಯಾಂಕು, ಪ್ರಕರಣದ ಕಕ್ಷಿದಾರರು ನಿವೃತ್ತರಾಗಿ 15 ವರ್ಷಗಳು ಆಗಲೇ ಕಳೆದಿದೆ ಎಂದು ಕಮ್ಯುಟೇಷನ್ ಬಾಕಿ ಪಾವತಿಯನ್ನು ನಿರಾಕರಿಸಿತು. ಆ ಸಂದರ್ಭದಲ್ಲಿ ಪಿಂಚಣಿದಾರರ ಯಾವುದೇ ಶೃಂಗ ಸಂಸ್ಥೆಗಳು ನಮ್ಮ ನೆರವಿಗೆ ಬಾರದ ಕಾರಣ ನಾವೇ ನೇರವಾಗಿ ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಲಯ ನಿಂದನೆ ಪ್ರಕರಣಬನ್ನು ದಾಖಲಿಸಿದೆವು. ನಮ್ಮ ವಾದವನ್ನು ಒಪ್ಪಿದ ಸುಪ್ರೀಂ ಕೋರ್ಟು 20.08.2019ರಂದು ತೀರ್ಪು ನೀಡಿ, ಕಮ್ಯುಟೇಷನ್ ಪಾವತಿಸುವಾಗ ನಿಬಂಧನೆ 41ರ ಪ್ರಕಾರ ನಿವೃತ್ತಿ ದಿನದ ನಿವೃತ್ತನ ವಯಸ್ಸು ಹೊರತಾಗಿ ಬೇರೇನನ್ನೂ ಪರಿಗಣಿಸದೆ ಕಮ್ಯುಟೇಷನ್ ಬಾಕಿ ಹಣವನ್ನು ಪಾವತಿಸಿ, ಮಾಸಿಕ ಕಂತುಗಳನ್ನು ವಜಾ ಮಾಡದೆ ಆ ನಂತರದ ತಿಂಗಳಿನಂತೆ ವಸೂಲು ಮಾಡಲು ಆದೇಶಿಸಿತು. ಇದರಿಂದಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ 648 ನಿವೃತ್ತ ಉದ್ಯೋಗಿಗಳಿಗೆ ಪೂರ್ಣ ಪ್ರಮಾಣದ ಕಮ್ಯುಟೇಷನ್ ಬಾಕಿ ಹಣ ಲಭಿಸಿತು. ಬ್ಯಾಂಕಿಂಗ್ ಉದ್ಯಮದಲ್ಲಿ ಇದೊಂದು ಚರಿತ್ರಾರ್ಹ ಸಾಧನೆ. ಈಗ ನಮ್ಮ ಶೃಂಗ ಸಂಸ್ಥೆಯಾದ ಅಖಿಲ ಭಾರತ ಬ್ಯಾಂಕ್ ನಿವೃತ್ತರ ಸಂಘವೂ ಸೇರಿದಂತೆ ಎಲ್ಲಾ ನಿವೃತ್ತರ ಸಂಘಗಳೂ ಇದು ನಮ್ಮ ಕಮ್ಯೂನು ನ್ಯಾಯಬದ್ಧ ಹಕ್ಕಿಗಾಗಿ ನಡೆಸಿದ ಹೋರಾಟ ಎಂಬುದನ್ನು ಒಪ್ಪಿಕೊಂಡು ಸುಪ್ರೀಂ ಕೋರ್ಟಿನ ತೀರ್ಪನ್ನು ಎಲ್ಲಾ ಬ್ಯಾಂಕುಗಳ ನಿವೃತ್ತರಿಗೂ ವಿಸ್ತರಿಸಬೇಕು ಎಂದು ಭಾರತೀಯ ಬ್ಯಾಂಕುಗಳ ಸಂಘದಲ್ಲಿ (ಐಬಿಎ) ತಮ್ಮ ಒತ್ತಾಯ ಮಂಡಿಸಿ, ಸಧ್ಯದಲ್ಲಿಯೇ ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಹಾಕಲು ಸಿದ್ಧತೆ ನಡೆಸಿವೆ.

ಹೀಗೆ ಬ್ಯಾಂಕಿಂಗ್ ಉದ್ಯಮದಲ್ಲಿ ಪಿಂಚಣಿದಾರರಿಗೆ ಸಂಬಂಧಿಸಿದಂತೆ ಹೊಸ ಕಾರ್ಯಸೂಚಿಯೊಂದನ್ನು ಹುಟ್ಟು ಹಾಕಿದ್ದೇವೆ ಎಂಬುದೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪಿಂಚಣಿದಾರರ ಕಮ್ಯೂನಿಗೆ ಮತ್ತು ಅದರ ಸದಸ್ಯರಿಗೆ ಹೆಮ್ಮೆಯ ವಿಷಯ.

## ಕಮ್ಯೂನಿನ ರಜತ ಮಹೋತ್ಸವ ವರ್ಷದ ವಿಡಿಯೋ

ನಾವು ಈಗ ಕಮ್ಯೂನಿನ ರಜತ ಮಹೋತ್ಸವದ ಸಂಭ್ರಮದಲ್ಲಿದ್ದೇವೆ. ಈ ಹಿನ್ನೆಲೆಯಲ್ಲಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕಮ್ಯೂನು ನಡೆದುಬಂದ ಹಾದಿಯ ಬಗ್ಗೆ ಪಕ್ಷಿನೋಟ ಬೀರುವ 5.55 ನಿಮಿಷಗಳ ವಿಡಿಯೋವನ್ನು ಹೊರತಂದಿದ್ದೇವೆ. ಕಮ್ಯೂನಿನ ಸದಸ್ಯರು ಈ ವಿಡಿಯೋವನ್ನು ವೀಕ್ಷಿಸಿ, ಅದನ್ನು ಇನ್ನಷ್ಟು ಉತ್ತಮಪಡಿಸುವಲ್ಲಿ ಸಲಹೆಗಳೇನಾದರೂ ಇದ್ದಲ್ಲಿ, ನಮಗೆ ನೀಡಬೇಕೆಂದು ವಿನಂತಿ. ವಿಡಿಯೋ ನೋಡಲು ಈ ಕೊಂಡಿಯನ್ನು (ಲಿಂಕ್) ಬಳಸಿ : **https://drive.google.com/open? id = 1zUiMvXG86J_EjbOg C7xNkhKq4GZGLJOV**

## ಪಿಂಚಣಿದಾರರ ಗುರುತು ಕಾರ್ಡುಗಳು

ಭಾರತೀಯ ಸ್ಟೇಟ್ ಬ್ಯಾಂಕು ದೇಶಾದ್ಯಂತ ಇರುವ ತನ್ನ ಎಲ್ಲಾ ಪಿಂಚಣಿದಾರರಿಗೂ ಏಕರೂಪದ ವಿನ್ಯಾಸ ಹಾಗೂ ನಿಗದಿತ ಅಳತೆ ಮತ್ತು ಗಾತ್ರದ ಪಿಂಚಣಿದಾರರ ಗುರುತು ಕಾರ್ಡುಗಳನ್ನು ವಿತರಿಸಬೇಕೆಂದು ಎಲ್ಲಾ ಸ್ಥಳೀಯ ಪ್ರಧಾನ ಕಛೇರಿಗಳಿಗೂ ಆದೇಶ ನೀಡಿದೆ. ಈಗಾಗಲೇ ಹೊಸ ಕಾರ್ಡುಗಳ ತಯಾರಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ನಮ್ಮ ಸದಸ್ಯರು ಸ್ಥಳೀಯ ಪ್ರಧಾನ ಕಛೇರಿಯಿಂದ ಕಾರ್ಡು ವಿತರಣಾ ದಿನಾಂಕದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ನಿರೀಕ್ಷಿಸಬೇಕೆಂದು ಕೋರಲಾಗಿದೆ.

## ತುಟ್ಟಿಭತ್ಯೆ ಸ್ಥಗಿತ ಮತ್ತು ವೇತನ ಕಡಿತ

ಕೋವಿಡ್–19 ಕಾರಣದಿಂದ ಕೇಂದ್ರ ಸರ್ಕಾರವು ತನ್ನೆಲ್ಲಾ ನೌಕರರು ಮತ್ತು ಪಿಂಚಣಿದಾರರಿಗೆ ಜೂನ್ 2021ರವರೆಗೆ ಹೆಚ್ಚುವರಿ ತುಟ್ಟಿಭತ್ಯೆ ಪಾವತಿಯನ್ನು ಸ್ಥಗಿತಗೊಳಿಸಿದೆ. ಕೇಂದ್ರವನ್ನು ಅನುಕರಿಸಿದ ಕರ್ನಾಟಕ, ಕೇರಳ, ತೆಲಂಗಾಣ ಸೇರಿದಂತೆ ಹಲವು ರಾಜ್ಯ ಸರ್ಕಾರಗಳೂ ತನ್ನ ನೌಕರರು ಹಾಗೂ ಪಿಂಚಣಿದಾರರ ಹೆಚ್ಚುವರಿ ತುಟ್ಟಿಭತ್ಯೆಯನ್ನು ಸ್ಥಗಿತಗೊಳಿಸಿರುವುವಲ್ಲದೆ, ಕೆಲವು ಸರ್ಕಾರಗಳು ಕೋವಿಡ್–19 ಪಿಡುಗಿಗೆ ಸಂಬಂಧಿಸಿದ ಖರ್ಚುವೆಚ್ಚಗಳಿಗಾಗಿ ವೇತನ/ಪಿಂಚಣಿ ಕಡಿತವನ್ನೂ ಘೋಷಿಸಿವೆ.

ದೆಹಲಿಯ ಉಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಭಾರತ ಸರ್ಕಾರದ ನಿರ್ಧಾರವನ್ನು ಎತ್ತಿ ಹಿಡಿದಿದ್ದು, ಕೇಂದ್ರ ನಾಗರಿಕ ಸೇವೆಗಳ (ಪಿಂಚಣಿ) ನಿಯಮಗಳು 1972ರ ಪ್ರಕಾರ ಸರ್ಕಾರವು ನಿಗದಿಪಡಿಸುವ ದರದಲ್ಲಿ ತುಟ್ಟಿಭತ್ಯೆಯನ್ನು ಪಾವತಿ ಮಾಡಬೇಕು. ಆದುದರಿಂದ ತುಟ್ಟಿಭತ್ಯೆಯನ್ನು ಸ್ಥಗಿತಗೊಳಿಸುವ ನಿರ್ಧಾರವನ್ನು ಸರ್ಕಾರವು ಕೈಗೊಳ್ಳುವುದರಲ್ಲಿ ತಪ್ಪಿಲ್ಲ ಎಂದು ಹೇಳಿದೆ. ನ್ಯಾಯಾಲಯದ ಈ ಆದೇಶದಿಂದಾಗಿ, ಪಿಂಚಣಿಯನ್ನು ಸರ್ಕಾರ ನಿಗದಿಪಡಿಸಿದಂತೆ ಪಿಂಚಣಿ ನಿಯಮಾವಳಿಗಳ ಪ್ರಕಾರವೇ ಪಾವತಿ ಮಾಡಬೇಕೆಂಬ ನಮ್ಮ ಕಮ್ಯೂನಿನ ಬೇಡಿಕೆಗೆ ಪುಷ್ಟಿ ದೊರೆತಿದೆ.

ಈ ಮಧ್ಯೆ ತೆಲಂಗಾಣ ಉಚ್ಚ ನ್ಯಾಯಾಲಯವು ಸರ್ಕಾರಕ್ಕೆ ವೇತನ ಅಥವಾ ಪಿಂಚಣಿಯನ್ನು ಸ್ಥಗಿತಗೊಳಿಸುವ ಅಥವಾ ಕಡಿತಗೊಳಿಸುವ ಯಾವುದೇ ಅಧಿಕಾರ ಇಲ್ಲವೆಂದು ಹೇಳಿ ನಿಲುವನ್ನು ತಾಳಿದೆ.

ಬ್ಯಾಂಕ್ ನೌಕರರ ವೇತನ ಮತ್ತು ಪಿಂಚಣಿಗಳನ್ನು ದ್ವಿಪಕ್ಷೀಯ ಒಪ್ಪಂದದನ್ವಯ ನಿರ್ಣಯಿಸುವುದರಿಂದ, ಸರ್ಕಾರವು ಏಕಪಕ್ಷೀಯವಾಗಿ ತುಟ್ಟಿಭತ್ಯ ಸ್ಥಗಿತ ಅಥವಾ ವೇತನ ಕಡಿತದಂತಹ ನಿರ್ಧಾರಗಳನ್ನು ಕೈಗೊಳ್ಳುವುದು ಅಸಾಧ್ಯ.

## ಸ್ವಯಂ ನಿವೃತ್ತರಿಗೆ ಠೇವಣಿಗಳ ಮೇಲೆ ಶೇ. 1ರಷ್ಟು ಹೆಚ್ಚುವರಿ ಬಡ್ಡಿ

ಸ್ವಯಂ ನಿವೃತ್ತಿ ಯೋಜನೆಯಲ್ಲಿ ಮತ್ತು ತಾವಾಗಿಯೇ ಸ್ವಯಂ ನಿವೃತ್ತಿ ಪಡೆದುಕೊಂಡ ಈ ಹಿಂದಿನ ಸಹವರ್ತಿ ಬ್ಯಾಂಕ್ ಉದ್ಯೋಗಿಗಳ ಠೇವಣಿಗಳ ಮೇಲೆಯೂ ಶೇ. 1 ರಷ್ಟು ಹೆಚ್ಚುವರಿ ಬಡ್ಡಿಯನ್ನು ನೀಡಬೇಕೆಂಬ ನಮ್ಮ ಶೃಂಗ ಸಂಸ್ಥೆಯಾದ ಸ್ಟೇಟ್ ಬ್ಯಾಂಕ್ ನಿವೃತ್ತರ ಸಂಘದ ಆಗ್ರಹಕ್ಕೆ ಒಪ್ಪಿಗೆ ಸೂಚಿಸಿರುವ ಭಾರತೀಯ ಸ್ಟೇಟ್ ಬ್ಯಾಂಕಿನ ಕೇಂದ್ರ ಕಛೇರಿಯು ಶೇ. 1 ಬಡ್ಡಿ ಹೆಚ್ಚಳದ ಬಗ್ಗೆ ದಿನಾಂಕ 16.06.2020ರಂದು ಸುತ್ತೋಲೆ ಹೊರಡಿಸಿದೆ. ಈ ಮೊದಲು ಹೆಚ್ಚುವರಿ ಬಡ್ಡಿ ಸೌಲಭ್ಯವನ್ನು ಸಹವರ್ತಿ ಬ್ಯಾಂಕುಗಳಲ್ಲಿ ನಿವೃತ್ತಿ ವಯೋಮಾನದಂದು ನಿವೃತ್ತರಾದವರಿಗೆ ಮಾತ್ರ ವಿಸ್ತರಿಸಿ ಸ್ವಯಂ ನಿವೃತ್ತಿ ಪಡೆದವರಿಗೆ ನಿರಾಕರಿಸಲಾಗಿತ್ತು. ಮುಂದೊಮ್ಮೆ ಹಿಂದಿನ ಸುತ್ತೋಲೆ ಆಧರಿಸಿ ಶಾಖಾ ಮಟ್ಟದಲ್ಲಿ ಹೆಚ್ಚುವರಿ ಬಡ್ಡಿ ಸೌಲಭ್ಯವನ್ನು ನಿರಾಕರಿಸುವ ಸಾಧ್ಯತೆಗಳಿರುವುದರಿಂದ ಪ್ರತಿಯೊಬ್ಬರೂ ಪರಿಷ್ಕೃತ ಸೂಚನೆಗಳು ಸುತ್ತೋಲೆಯನ್ನು ಖಾಯಂ ಆಗಿ ಕಾಪಿಟ್ಟುಕೊಳ್ಳುವುದು ಒಳ್ಳೆಯದು.

## ಪಿಂಚಣಿದಾರರಿಗೆ ಸಾಲ ಯೋಜನೆಯಲ್ಲಿ ಮಾರ್ಪಾಡುಗಳು

ಈ ಮೊದಲು ಪಿಂಚಣಿದಾರರಿಗೆ ಸಾಲ ನೀಡುವಾಗ ಪಿಂಚಣಿದಾರನ/ಳ ಬಾಳಸಂಗಾತಿಯ ಜಾಮೀನು ಅವಶ್ಯಕವಾಗಿತ್ತು. ಈಗ 4ನೇ ಮಾರ್ಚ್ 2020ರ ಸುತ್ತೋಲೆಯ ಪ್ರಕಾರ ಈ ನಿಯಮವನ್ನು ಮಾರ್ಪಡಿಸಿ, ಭಾರತೀಯ ಸ್ಟೇಟ್ ಬ್ಯಾಂಕಿನ ಪಿಂಚಣಿದಾರರೂ ಸೇರಿದಂತೆ ಎಲ್ಲಾ ಕ್ರಮಬದ್ಧ ಪಿಂಚಣಿದಾರರಿಗೂ ಮೂರನೇ ವ್ಯಕ್ತಿಯ ಜಾಮೀನಿಲ್ಲದೆ ಸಾಲ ಸೌಲಭ್ಯ ನೀಡಲು ತೀರ್ಮಾನಿಸಲಾಗಿದೆ. ಸಾಲ ವಿತರಿಸಿದ ಮುಂದಿನ ತಿಂಗಳಿನಿಂದ ಮರುಪಾವತಿ ಪ್ರಾರಂಭವಾಗಲಿದ್ದು, ಸಾಲವನ್ನು 78 ಸಮಾನ ಮಾಸಿಕ ಕಂತುಗಳಲ್ಲಿ ಅಥವಾ ಪಿಂಚಣಿದಾರನು/ಳು ಅಥವಾ ಕುಟುಂಬ ಪಿಂಚಣಿದಾರನು/ಳು ತನ್ನ 78ನೇ ವಯಸ್ಸು ಮೀರುವುದರೊಳಗೇ ಮರುಪಾವತಿ ಮಾಡಲು ಅವಕಾಶವಿದೆ. ಸಾಲದ ಮೇಲೆ ಯಾವುದೇ ಸೇವಾ ಶುಲ್ಕ ವಿಧಿಸಲಾಗುವುದಿಲ್ಲ. ಹಣಕಾಸು ಅವಶ್ಯಕತೆ ಇರುವ ಸದಸ್ಯರು ಈ ಸಾಲ ಸೌಲಭ್ಯವನ್ನು ಬಳಸಿಕೊಳ್ಳಬಹುದು.

## ಆರೋಗ್ಯ ವಿಮೆ–ಎಸ್‌ಬಿಐ ಗ್ರೂಪ್ ಮೆಡಿಕ್ಲೇಮ್ ಪಾಲಿಸಿ – ಇ–ಫಾರ್ಮಸಿ ಸೌಲಭ್ಯ ಜಾರಿ

ಭಾರತೀಯ ಸ್ಟೇಟ್ ಬ್ಯಾಂಕು ತನ್ನ 27ನೇ ಡಿಸೆಂಬರ್ 2019ರ ಸುತ್ತೋಲೆಯ ಪ್ರಕಾರ, ಆರೋಗ್ಯ ವಿಮಾ ಯೋಜನೆಯನ್ನು 16ನೇ ಜನವರಿ 2020ರಿಂದ ಜಾರಿಗೊಳಿಸಿದೆ. ಮೈಸೂರು ಬ್ಯಾಂಕಿನಿಂದ ನಿವೃತ್ತರಾದ ಅನೇಕರು ಈ ಯೋಜನೆಗೆ ಸೇರಿದ್ದಾರೆ. 'ಎಸ್.ಬಿ.ಐ. ಹೆಲ್ತ್ ಅಸಿಸ್ಟ್" ಅಡಿಯಲ್ಲಿ ವಾರ್ಷಿಕ ಪಾವತಿ ಯೋಜನೆಯನ್ನು (ಎಪಿಪಿ) ಆಯ್ಕೆ ಮಾಡಿಕೊಂಡವರಿಗೆ ಇ–ಫಾರ್ಮಸಿ ಮೂಲಕ ನಗದುರಹಿತ ಗೃಹೋಪಚಾರ ಸೌಲಭ್ಯ ಒದಗಿಸುವುದಾಗಿ ಈ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಯೋಜನೆಯ ನಿಯಮಗಳನ್ವಯ ವಾರ್ಷಿಕ ಪಾವತಿ ಯೋಜನೆಯ ಸದಸ್ಯರು ಯಾವುದೇ ನೋಂದಾಯಿತ ವೈದ್ಯರು ನೀಡಿರುವ

ಕ್ರಮಬದ್ಧ ಔಷಧಚೀಟಿಯನ್ನು 'ಯುಆರ್ ವರ್ಲ್ಡ್' (UR World) ಎಂಬ ಆಪ್‌ಗೆ ಅಪ್‌ಲೋಡ್ ಮಾಡುವುದರ ಮೂಲಕ ಔಷಧಗಳನ್ನು ಪಡೆಯಲು / ಖರೀದಿಸಲು ಅರ್ಹರಾಗಿರುತ್ತಾರೆ.

ಸದಸ್ಯರಿಗೆ ಇ-ಫಾರ್ಮಸಿ ಸೇವೆಗಳನ್ನು ಒದಗಿಸಲು ಬ್ಯಾಂಕು, ಅಪೋಲೋ ಲೈಫ್ ಎಂದೇ ಜನಪ್ರಿಯವಾಗಿರುವ ಲೈಫ್‌ಟೈಂ ವೆಲ್ನೆಸ್ ಆರ್‌ಎಕ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಎಂಬ ಸಂಸ್ಥೆಯನ್ನು ನೇಮಕಮಾಡಿದೆ. ಸದಸ್ಯರು ಔಷಧಿಗಾಗಿ ತಮ್ಮ ಕೋರಿಕೆಗಳನ್ನು ಈ ಆಪ್ ಮುಖಾಂತರ ಮಾತ್ರ ಸಲ್ಲಿಸಬೇಕೇ ಹೊರತು, ಮಾನವಹಸ್ತದ ಮೂಲಕ (manually) ಸಲ್ಲಿಸುವಂತಿಲ್ಲ. 'ಯುಆರ್ ವರ್ಲ್ಡ್' (UR World) ಆಪ್‌ನ್ನು ಗೂಗಲ್ ಪ್ಲೇ ಸ್ಟೋರ್ ನಿಂದ ಆಂಡ್ರಾಯ್ಡ್ ಮೊಬೈಲ್ ಫೋನಿನಲ್ಲಿ ಮಾತ್ರ ಅಥವಾ ಈ ಕೆಳಕಂಡ ಲಿಂಕನ್ನು ಕ್ಲಿಕ್ ಮಾಡುವುದರ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

**https://play.google.com/store/apps/details?id=com.apollo.urworld**

**ಇ-ಫಾರ್ಮಸಿ ಯೋಜನೆಯ ಮುಖ್ಯಾಂಶಗಳು ಹೀಗಿವೆ :**

- ಸದಸ್ಯರು ತಮಗೆ, ತಮ್ಮ ಬಾಳಸಂಗಾತಿಗೆ ಮತ್ತು ಅಂಗವಿಕಲ ಮಕ್ಕಳಿಗೆ (ವಾರ್ಷಿಕ ಪಾವತಿ ಯೋಜನೆಯಲ್ಲಿ ದಾಖಲಾಗಿರುವಂತೆ) ನಿಗದಿತ ಮಿತಿಯವರೆಗೆ ಔಷಧಗಳನ್ನು ಪಡೆಯಬಹುದು.

- ಸದಸ್ಯರು ವಾರ್ಷಿಕ ರೂ. 12,000 ವರೆಗೆ ಔಷಧ ಪಡೆಯಲು ಅರ್ಹರಾಗಿದ್ದು, ಈ ಪೈಕಿ ಮೊದಲ ರೂ. 4000 ವರೆಗಿನ ಔಷಧಗಳನ್ನು ಸದಸ್ಯರೇ ಹಣ ಪಾವತಿಸಿ ಪಡೆಯಬೇಕು. ನಂತರದ ರೂ. 8000 ವರೆಗಿನ ಔಷಧಗಳನ್ನು ಸದಸ್ಯರಿಂದ ಹಣ ಸ್ವೀಕರಿಸದೇ ಸರಬರಾಜು ಮಾಡಲಾಗುವುದು. (ಈ ಮೊದಲು ಒಟ್ಟು ರೂ. 18000 ಮೊತ್ತದಲ್ಲಿ ರೂ. 6000 ವರೆಗಿನ ಮೊತ್ತವನ್ನು ಸದಸ್ಯರು ಭರಿಸಬೇಕೆಂದು ತಿಳಿಸಲಾಗಿತ್ತು. ಈಗಾಗಲೇ ನಾಲ್ಕು ತಿಂಗಳುಗಳು ಕಳೆದಿರುವುದರಿಂದ ಈಗ ಯೋಜನೆಯ ಒಟ್ಟು ಮೊತ್ತವನ್ನು ಈಗ ರೂ. 12000ಕ್ಕೆ ಇಳಿಸಲಾಗಿದೆ).

- ವಿಕ್ರಯದಾರ ಕಂಪನಿಯು ಔಷಧಗಳನ್ನು ವಾರ್ಷಿಕ ಪಾವತಿ ಯೋಜನೆಯಲ್ಲಿ ನೋಂದಾಯಿಸಿದ ಸದಸ್ಯರ ವಿಳಾಸಕ್ಕೆ ಬಟವಾಡೆ ಮಾಡುತ್ತದೆ. ಬೇರೆ ವಿಳಾಸದಲ್ಲಿ ಬಟವಾಡೆ ಮಾಡಬೇಕೆಂದು ಕೋರುವ ಸದಸ್ಯರ ಯಾವುದೇ ಮನವಿಗಳನ್ನೂ ಪರಿಗಣಿಸಲಾಗುವುದಿಲ್ಲ. ಆದರೆ ಮಾನ್ಯ ಮಾಡಬಹುದಾದ ಕಾರಣಗಳಿದ್ದಲ್ಲಿ, ಸಂಬಂಧಪಟ್ಟ ಆಡಳಿತ ಕಛೇರಿಯ ಮೂಲಕ ಸದಸ್ಯರು ಸಲ್ಲಿಸುವ ನೋಂದಾಯಿತ ವಿಳಾಸ ಬದಲಾವಣೆಯ ಮನವಿಗಳನ್ನು ಪರಿಗಣಿಸಲು ಕಾರ್ಪೋರೇಟ್ ಸೆಂಟರಿನಲ್ಲಿ ಮಾತ್ರ ಅವಕಾಶವಿದೆ. ಸೇವೆಯನ್ನು ಪ್ರಾರಂಭಿಸಿದ ನಂತರ ಆಪ್‌ನಲ್ಲಿ ವಿಳಸವು ಅಸಮರ್ಪಕವಾಗಿ ದಾಖಲಾಗಿದೆ ಎಂದು ಕಂಡುಬಂದಲ್ಲಿ ಅದನ್ನು ಆಯಾ ಸದಸ್ಯರೇ ಆಪ್‌ನಲ್ಲಿ ಮಾರ್ಪಾಡು ಮಾಡಬಹುದು.

- ಒಂದೇ ಮೊಬೈಲ್ ಸಂಖ್ಯೆಯನ್ನು ಒಂದಕ್ಕಿಂತ ಹೆಚ್ಚು ಪಿ.ಎಫ್. ಇಂಡೆಕ್ಸ್ ಸಂಖ್ಯೆಗೆ ಜೋಡಿಸಲು ಅವಕಾಶವಿರುವುದಿಲ್ಲ. ದಾಖಲಾಗಿರುವ ಮೊಬೈಲ್ ಸಂಖ್ಯೆಯಲ್ಲಿ ಲೋಪದೋಷಗಳಿದ್ದಲ್ಲಿ ಅಥವಾ ಮೊಬೈಲ್ ಸಂಖ್ಯೆಯನ್ನು ಬದಲಾಯಿಸಬೇಕಿದ್ದಲ್ಲಿ, ಸಂಬಂಧಪಟ್ಟ ಆಡಳಿತ ಕಛೇರಿಯ ಮೂಲಕ ಕಾರ್ಪೋರೇಟ್ ಸೆಂಟರಿನಲ್ಲಿ ಸರಿಪಡಿಸಬಹುದು.

- ಮೊಬೈಲ್ ಸಂಖ್ಯೆ ಆಧಾರಿತ 'ಯುಆರ್ ವರ್ಲ್ಡ್' ಆಪ್ ಪ್ರವೇಶಿಸಿದಾಗ (ಲಾಗಿನ್), ಯೋಜನೆಯಲ್ಲಿ ನೋಂದಾಯಿತ ಸದಸ್ಯರ ಮೊಬೈಲ್‌ಗೆ ಒನ್ ಟೈಂ ಪಾಸ್ವರ್ಡ್ (ಒಟಿಪಿ) ಬರುತ್ತದೆ. ಅದನ್ನು ದಾಖಲಿಸಿದ ನಂತರ ಔಷಧಗಳಿಗೆ ಕೋರಿಕೆಯನ್ನು ಸಲ್ಲಿಸಲು ಸದಸ್ಯರು ಕಾಯಿದೆಬದ್ಧ ಹಾಗೂ ಕ್ರಮಬದ್ಧ ಔಷಧ ಚೀಟಿಯನ್ನು ಅಪ್‌ಲೋಡ್ ಮಾಡಬೇಕು. ಔಷಧ ಚೀಟಿಯು ಸಮರ್ಪಕವೂ, ಸ್ಪಷ್ಟವೂ ಆಗಿದ್ದು ಅದರಲ್ಲಿ ನಿವೃತ್ತರ ಅಥವಾ ಬಾಳಸಂಗಾತಿಯ ಅಥವಾ ಅಂಗವಿಕಲ ಮಕ್ಕಳ ಹೆಸರು ಮತ್ತು ವಯಸ್ಸು ನಮೂದಿಸಿರಬೇಕು.

- ವೈದ್ಯರು ನೀಡಿದ ಔಷಧಚೀಟಿಗೆ 180 ದಿನಗಳವರೆಗೆ ಮಾತ್ರ ಮಾನ್ಯತೆ ಇರುತ್ತದೆ. ಈ ಅವಧಿಯನ್ನು ದಾಟಿದ ಔಷಧಚೀಟಿಗಳನ್ನು ಪರಿಗಣಿಸಲಾಗುವುದಿಲ್ಲ.

- ವಿಕ್ರಯದಾರ ಕಂಪನಿಯು ಭಾನುವಾರವೂ ಸೇರಿದಂತೆ ಎಲ್ಲಾ ದಿನಗಳೂ ಬೆಳಗ್ಗೆ 9.00 ರಿಂದ ಸಂಜೆ 6.00 ರವರೆಗೆ ಕಾರ್ಯನಿರ್ವಹಿಸುತ್ತದೆ. ಸದಸ್ಯರಿಂದ ಔಷಧ ಕೋರಿಕೆಯು ಅಪ್‌ಲೋಡ್ ಆದ ನಾಲ್ಕು ಗಂಟೆಗಳ ಒಳಗೇ ವಿಕ್ರಯದಾರ ಕಂಪನಿಯು ಸದಸ್ಯರಿಗೆ ಕರೆಮಾಡಿ ಅವರು ಸಲ್ಲಿಸಿದ ಕೋರಿಕೆ ಮತ್ತು ಅಪೇಕ್ಷಿಸಿದ ಔಷಧಗಳ ಪರಿಮಾಣವನ್ನು ಖಚಿತಪಡಿಸಿಕೊಂಡು ನಂತರ ಔಷಧ ರವಾನಿಸುವ ಪ್ರಕ್ರಿಯೆಯನ್ನು ಆರಂಭಿಸುತ್ತದೆ. ಕಂಪನಿಯ ಕೆಲಸದ ವೇಳೆಯ ನಂತರ ಔಷಧ ಕೋರಿಕೆಯನ್ನು ಅಪ್‌ಲೋಡ್ ಮಾಡಿದಲ್ಲಿ, ಕಂಪನಿಯಿಂದ ಖಚಿತಪಡಿಸಿಕೊಳ್ಳುವ ಕರೆ ಮರುದಿನ ಬರುತ್ತದೆ.

- ಕೇವಲ ಅಲೋಪತಿ ಔಷಧಗಳನ್ನು ಮತ್ತು ಸರಬರಾಜು ಮಾಡಲಾಗುವುದು.

- ಸದಸ್ಯರಿಗೆ ವಿಕ್ರಯದಾರ ಕಂಪನಿಯು ಎಲ್ಲಾ ಬಗೆಯ ಔಷಧಗಳಿಗೂ ಗರಿಷ್ಠ ಚಿಲ್ಲರೆ ಬೆಲೆಯ (ಎಂ ಆರ್ ಪಿ) ಮೇಲೆ ಶೇ. 18ರಷ್ಟು ರಿಯಾಯತಿ ನೀಡುತ್ತದೆ. ಯೋಜನೆಯ ಅವಧಿಯಲ್ಲಿ ಸದಸ್ಯರ ಒಟ್ಟು ಔಷಧಗಳ ಮೊತ್ತವು ಗರಿಷ್ಠ ಮಿತಿ ರೂ. 12000 ಮೀರಿದಲ್ಲಿ, ಹೆಚ್ಚುವರಿ ಮೊಬಲಗನ್ನು ಸದಸ್ಯರೇ ಭರಿಸಬೇಕಾಗುತ್ತದೆ. ಈ ಹೆಚ್ಚುವರಿ ಖರೀದಿಗೂ ವಿಕ್ರಯದಾರ ಕಂಪನಿಯು ಸೂಕ್ತ ರಿಯಾಯತಿ ನೀಡುತ್ತದೆ.

- ಔಷಧಗಳ ಬಟವಾಡೆ ಸಮಯದಲ್ಲಿ ಸದಸ್ಯರು ನಗದು ಅಥವಾ ಸ್ವೈಪ್ ಯಂತ್ರಗಳ ಮೂಲಕ ಹಣ ಪಾವತಿ ಮಾಡುವ ಸೌಲಭ್ಯವಿರುತ್ತದೆ.

- ಒಮ್ಮೆ ಔಷಧಗಳನ್ನು ಪಡೆದ ನಂತರ ಸದಸ್ಯರು ಬ್ಯಾಂಕಿನ ಬೇರಾವುದೇ ಯೋಜನೆಯಲ್ಲಿಯೂ ಇದೇ ಖರ್ಚುವೆಚ್ಚವನ್ನು ಮೊತ್ತೊಮ್ಮೆ ಪಡೆಯುವಂತಿಲ್ಲ.

- ವಿಕ್ರಯದಾರ ಕಂಪನಿಯು ಮಹಾನಗರ/ನಗರ/ಅರೆನಗರ ಪ್ರದೇಶಗಳಲ್ಲಿ ಆದೇಶ ನೀಡಿದ 12 ರಿಂದ 36 ಗಂಟೆಗಳ ಒಳಗೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 72 ರಿಂದ 96 ಗಂಟೆಗಳ ಒಳಗೆ ಸದಸ್ಯರಿಗೆ ಔಷಧ ಬಟವಾಡ ಮಾಡಬೇಕೆಂದು ನಿಗದಿಪಡಿಸಲಾಗಿದೆ.

Posted on 30.06.2020 No. of Page : 10

Registered with the Registrar of Newspapers for India under RNI No.KARBIL/2016/69545 Postal Reg. No.KA/BGW-1788/2020-2022, Reg. No.MAG (3)/NPP/391/2015-16. Licence to post without Pre-payment. License No.WPP-356/2020-22.
Published on 15th of every month and posted on 30.06.2020 and posted at Bengaluru PSO, Bengaluru – 560 026.

Printed and Published by : Shri C N Prasad by and on behalf of State Bank of Mysore Pensioners' Commune at 1st Floor, SBI Mysore Bank Circle Branch Premises, 644/645, Avenue Road, Bengaluru - 560 009.
Printed @ Cauvery Enterprises # 18, "Cauvery", 8th Main, 8th Cross, S. R. Nagar, Bengaluru - 560 027.
Editor : Shri V. Dattathri

- ಬಟವಾಡೆ ಸಮಯದಲ್ಲಿ ಸದಸ್ಯರು ತಮ್ಮಲ್ಲಿರುವ ಮೂಲ ಔಷಧಚೀಟಿ ಮತ್ತು ಕ್ರಮಬದ್ಧ ಗುರುತಿನ ಪುರಾವೆಗಳನ್ನು ಕಡ್ಡಾಯವಾಗಿ ತೋರಿಸುವುದು ಅಗತ್ಯ.

- ಔಷಧಗಳಿಗಾಗಿ ಒಮ್ಮೆ ನೀಡಿದ ಆದೇಶಗಳನ್ನು ರದ್ದುಪಡಿಸ ಬೇಕಾದಲ್ಲಿ ಸದಸ್ಯರು ಆಪ್ ಪ್ರವೇಶಿಸಿ ಅದರಲ್ಲಿ 'ಆದೇಶ ರವಾನಿಸಲ್ಪಟ್ಟಿದೆ' (**Order Dispatched**) ಎಂಬ ಸಂದೇಶ ಕಂಡುಬರದಿದ್ದಲ್ಲಿ ಸದಸ್ಯರೇ ತಮ್ಮ ಆದೇಶವನ್ನು ರದ್ದುಪಡಿಸಲು ಅವಕಾಶವಿದೆ. 'ಆದೇಶ ರವಾನಿಸಲ್ಪಟ್ಟಿದೆ' ಎಂಬ ಸಂದೇಶ ಮೂಡಿಬಂದ ನಂತರ ರದ್ದುಪಡಿಸಿದಲ್ಲಿ ಕಂಪನಿಯು ಸದಸ್ಯರಿಂದ ರೂ. 100 ದಂಡವನ್ನು ವಸೂಲಿ ಮಾಡುತ್ತದೆ.

- ಬಟವಾಡೆಯಾದ ನಂತರ ಔಷದಗಳನ್ನು ವಾಪಸು ಪಡೆಯಲಾಗುವುದಿಲ್ಲ. ಕನಿಷ್ಠ ರೂ. 250ರ ಮೊತ್ತದ ಆದೇಶಗಳನ್ನು ಮಾತ್ರ ಸ್ವೀಕರಿಸಲಾಗುವುದು.

- ಸದಸ್ಯರು ವಿಕ್ರಯದಾರ ಕಂಪನಿಗೆ ಬಿಲ್ಲಿನ ಮೊತ್ತ ಹೊರತಾಗಿ ಬೇರೆ ಯಾವುದೇ ಸೇವಾ ವೆಚ್ಚಗಳು, ಶುಲ್ಕಗಳು ಮತ್ತಿತರ ಹೆಚ್ಚುವರಿ ಖರ್ಚುಗಳನ್ನು ಪಾವತಿ ಮಾಡಬೇಕಿಲ್ಲ.

- ಪ್ರಸಕ್ತ ಸೌಕರ್ಯವು 1ನೇ ಜೂನ್ 2020 ರಿಂದ 15ನೇ ಜನವರಿ 2021 ರವರೆಗೆ ಲಭ್ಯವಿರುತ್ತದೆ.

ಈ ಯೋಜನೆಯು ಹಲವು ನ್ಯೂನತೆಗಳನ್ನು ಒಳಗೊಂಡಿದೆ. ಒಟ್ಟು ಮಿತಿಯನ್ನು ಈ ಹಿಂದೆ ಸೂಚಿಸಿದ ಮೊತ್ತಕ್ಕಿಂತ ಮೂರನೇ ಒಂದು ಭಾಗದಷ್ಟು ಕಡಿತಗೊಳಿಸಲಾಗಿದೆ. ಔಷಧಗಳಿಗೆ ಕೋರಿಕೆ ಸಲ್ಲಿಸಲು ಸದಸ್ಯರು ಆಂಡ್ರಾಯ್ಡ್ ಸ್ಮಾರ್ಟ್ ಫೋನುಗಳನ್ನು ಹೊಂದಿರಬೇಕು. ಇಂತಹ ಫೋನಿನ ಸೌಲಭ್ಯವಿಲ್ಲದ ಸದಸ್ಯರು ಇ-ಫಾರ್ಮಸಿ ಸೌಲಭ್ಯದಿಂದ ವಂಚಿತರಾಗುತ್ತಾರೆ. ಔಷಧಗಳನ್ನು ನೋಂದಾಯಿತ ವಿಳಾಸಕ್ಕೆ ಮಾತ್ರ ರವಾನಿಸಲಾಗುವುದು. ಆದರೆ ಅನೇಕ ಸದಸ್ಯರು ಕೋವಿಡ್–19 ಸೇರಿದಂತೆ ಹಲವು ಕಾರಣಗಳಿಂದಾಗಿ ಬೇರೆ ವಿಳಾಸಗಳಲ್ಲಿ ವಾಸವಾಗಿದ್ದಾರೆ. ತಂತ್ರಾಂಶದ ಕಾರ್ಯನಿರ್ವಹಣೆಯಲ್ಲಿಯೂ ಸಾಕಷ್ಟು ಅಡಚಣೆಗಳು ಕಂಡುಬಂದಿವೆ. ಈ ಅಂಶಗಳನ್ನು ನಮ್ಮ ಸ್ಟೇಟ್ ಬ್ಯಾಂಕ್ ನಿವೃತ್ತರ ಸಂಘವು ಭಾರತೀಯ ಸ್ಟೇಟ್ ಬ್ಯಾಂಕಿನ ಕೇಂದ್ರ ಕಛೇರಿಯ ಗಮನಕ್ಕೆ ತಂದಿದ್ದು, ಸೂಕ್ತ ಪರಿಹಾರಗಳನ್ನು ನಿರೀಕ್ಷಿಸಿದೆ.

## ಎಸ್.ಬಿ.ಐ. ಆರೋಗ್ಯ ವಿಮೆ – ಇ–ಕಾರ್ಡುಗಳು ಮತ್ತು ಸಂಪರ್ಕ ವಿವರಗಳು

ಎಸ್.ಬಿ.ಐ. ಆರೋಗ್ಯ ವಿಮೆಯ ವಾರ್ಷಿಕ ಪಾವತಿ ಯೋಜನೆಯನ್ನು ಆಯ್ಕೆ ಮಾಡಿಕೊಂಡಿರುವ ನಮ್ಮ ಬಹುತೇಕ ಸದಸ್ಯರು ಈಗಾಗಲೇ ಕೊರಿಯರ್ ಮೂಲಕ ಇ–ಕಾರ್ಡುಗಳನ್ನು ಸ್ವೀಕರಿಸಿದ್ದಾರೆ. ಹಲವು ಸದಸ್ಯರಿಗೆ ಕೋವಿಡ್–19ರ ಲಾಕ್‌ಡೌನ್ ನಿರ್ಬಂಧಗಳಿಂದಾಗಿ ಇ–ಕಾರ್ಡುಗಳು ಇನ್ನೂ ಲಭಿಸಿಲ್ಲ. ಅಂತಹವರು ಮೆಡಿಬಡ್ಡಿಯ ಇ–ಕಾರ್ಡುಗಳನ್ನು ಪಡೆಯಲು ತಮ್ಮ ಭವಿಷ್ಯ ನಿಧಿ ಸಂಖ್ಯೆ (ಪಿ.ಎಫ್. ಸಂಖ್ಯೆ) sbi.support@mediassist.in ನಮೂದಿಸಿ ವಿಳಾಸಕ್ಕೆ ಇ–ಮೇಲ್ ಕಳುಹಿಸಿದಲ್ಲಿ ಅವರು ಇ–ಕಾರ್ಡುಗಳನ್ನು ರವಾನಿಸುತ್ತರೆ. https://www.medibuddy.in/ ecard ಎಂಬ ಕೊಂಡಿಯನ್ನು (ಲಿಂಕ್) ಬಳಸಿ ಸೂಕ್ತ ವಿವರಗಳನ್ನು ದಾಖಲಿಸುವುದರ ಮೂಲಕ ಇ–ಕಾರ್ಡುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

**CONTACT DETAILS OF OUR COMMUNE :**

**Email ID :** sbmpensioners@gmail.com **Website :** www.sbmpensioners.in
**Email Group :** sbmpensioners@googlegroups.com **Face Book :** sbm.pensioners, **Post Box No.:** 9738
**Whatsapp : 702 602 7774 Phone Nos.: 259 44299**

Book-post

From

**STATE BANK OF MYSORE PENSIONERS' COMMUNE**

**Ground Floor, 'A' Block, BKG Complex,**
**SBI Mysore Bank Circle Br. Compound,**
**Avenue Road, Bangalore - 560009.**
**Ph. No. : Off:-259 44299 Mob : 7026027774**